ಪ್ರಥಮ ಬಿ.ಎ ಹೆಚ್.ಎಸ್.ಕೆ — ದಿ:- 12-03-2020 Sunday

ಉಪನ್ಯಾಸಕರು
ಡಾ. ಬಿ.ಎಸ್. ಮಂಜುಳ

ಕಾವ್ಯ ಸೌರಭ - ೪ (ಐಚ್ಛಿಕ ಕನ್ನಡ)

"ಪಾಶ್ಚಾತ್ಯ ಕಾವ್ಯಮೀಮಾಂಸೆ" -

I ಒಂದು ವಾಕ್ಯದ ಪ್ರಶ್ನೆಗಳು. ಐ.ಎ. ರಿಚರ್ಡ್ಸ್

1) ಕಲೆಯಿರುವುದು ಯಾವುದಕ್ಕೆ — ನೀತಿ, ಸಾಮಾಜಿಕ ಪ್ರಜ್ಞೆಯ ಪ್ರಚಾರಕ್ಕಾಗಿ, ಆಂತರಿಕ ಅಭಿವ್ಯಕ್ತಿಗಾಗಿ.

2) ಕಲಾನುಭವ ಎಂದರೆ — ಒಂದು ಮಾನಸಿಕ ಕ್ರಿಯೆ

3) ೨೦ನೇ ಶತಮಾನದ ಶ್ರೇಷ್ಠ ವಿಮರ್ಶಕರು — ಐ.ಎ. ರಿಚರ್ಡ್ಸ್

4) ರಿಚರ್ಡ್ಸ್ ವಿಮರ್ಶೆಯ ಕಾರ್ಯಕ್ಷೇತ್ರ ವಿಸ್ತಾರ ವಿಧಗಳು — 1. ಕಾವ್ಯ ತತ್ತ್ವಕ್ಕೆ ಸಂಬಂಧಿಸಿದ ವಿಚಾರಗಳು
2. ಕಾವ್ಯಾನುಭವದ ಸ್ವರೂಪ
3. ಕಾವ್ಯ ಮತ್ತು ಶಬ್ದಾರ್ಥ ಶಾಸ್ತ್ರ ವಿಚಾರ

5) ಐ.ಎ. ರಿಚರ್ಡ್ಸ್ ವಿಮರ್ಶೆಯ ಕಾರ್ಯವಿಧಾನಗಳನ್ನು ವಿವರಿಸಿ. (10 ಅಂಕಗಳ ಪ್ರಶ್ನೆ)

6) ಅನುಕರಣೆಯ ಅನುಕರಣೆ ಯಾವುದು? — ಕಾವ್ಯ

7) ಕಲ್ಪನೆಯ ಮೂಲಕ ನಿತ್ಯ ಸತ್ಯ ತತ್ತ್ವ ದರ್ಶನವನ್ನು ಕಾವ್ಯ ಒದಗಿಸುತ್ತದೆ- ಇದು ಯಾರ ಹೇಳಿಕೆ — ಪಿ.ಬಿ. ಶೆಲ್ಲಿ

8) ಕಾವ್ಯ ಒದಗಿಸುವ ಮಾನವನ ಮೂರು ಅಂಶಗಳಾವುವು - — [illegible], ತತ್ತ್ವ, ಧರ್ಮ, ಶಾಸ್ತ್ರ.

9) ಕಾವ್ಯದ ಸ್ವರೂಪವನ್ನು ಮನಶಾಸ್ತ್ರೀಯ ದೃಷ್ಟಿಯಿಂದ ವಿಶ್ಲೇಷಿಸಿ ನೋಡಿದವರು ಯಾರು — ಐ.ಎ. ರಿಚರ್ಡ್ಸ್

10) ಪ್ಲೇಟೋನ ವಾದವನ್ನು ಪ್ಲೇಟೋಗೆ ವಿರುದ್ಧವಾಗಿ ಬಳಸಿದವರು ಯಾರು — ಪಿ.ಬಿ. ಶೆಲ್ಲಿ.

ಟಿಪ್ಪಣಿಗಳು → ಕಲಾನುಭವ, ರಿಚರ್ಡ್ಸ್. [ಐದು ಅಂಕಗಳು] ಪ್ರವೃತ್ತಿಗಳು, ಕಾವ್ಯವನ್ನು ಓದುವ ಕ್ರಿಯೆ.

ಪ್ರಶ್ನೆಗಳು:-

1. ಕಲಾನುಭವವನ್ನು ಐ.ಎ. ರಿಚರ್ಡ್ಸ್‌ನ ದೃಷ್ಟಿಯಿಂದ ವಿವರಿಸಿ.
2. ಐ.ಎ. ರಿಚರ್ಡ್ಸ್‌ನ ಸಮಕಾಲೀನ ವಿಮರ್ಶಕರನ್ನು ಹೆಸರಿಸಿ — ರೋಜರ್ ಫ್ರೈ, ಕ್ಲೈವ್ ಮತ್ತು ಬೆಲ್

Scanned by CamScanner

3) ಮಾನಸಿಕ ಕ್ರಿಯೆಯಿಂದ ಸ್ವರೂಪವನ್ನು ವರ್ಣಿಸುವ ಶಾಸ್ತ್ರ ಯಾವುದು - ಮನಃಶಾಸ್ತ್ರ

4) ಆದರ್ಶ ಎಂದರೇನು - ಹೆಚ್ಚು ಸಮತೋಲನದ ಮನಸ್ಥಿತಿ ಸಾಧಿಸುವಂತಹ ಪದ್ಯ.

5) "ಅರ್ಥದ ಅರ್ಥ" ಗ್ರಂಥದ ಕರ್ತೃ ಯಾರು ? - ಐ.ಎ. ರಿಚರ್ಡ್ಸ್ ಮತ್ತು ಓಗ್ಡೆನ್

6) ಸಂಗತಿಗಳು ಹಾಗೂ ಸಂಗತಿಗಳ ಅರ್ಥ ವಿಂಗಡಿಸಲಾಗಿದೆ :- ಇದು ಯಾರ ಹೇಳಿಕೆ - ಐ.ಎ. ರಿಚರ್ಡ್ಸ್

7) ಕಾವ್ಯದ ಉದ್ದೇಶ ಯಾವುದು - ಆಂತರಿಕವಾಗಿ ಮಾನಸಿಕ ಸಮತೋಲನವನ್ನು ಸಾಧಿಸುವುದು.

8) ವಿಜ್ಞಾನ ಮತ್ತು ಕಾವ್ಯ ಕೃತಿಯ ಕರ್ತೃ - ರಿಚರ್ಡ್ಸ್

## 10 ಅಂಕದ ಪ್ರಶ್ನೆ

1. ಕಾವ್ಯದ ವಸ್ತು ಅದರ ಬಹಿರಂಗದ ಮತ್ತು ಅಂತರಂಗಗಳನ್ನು ಕುರಿತು ಐ.ಎ. ರಿಚರ್ಡ್ಸ್‌ನ ದೃಷ್ಟಿಕೋನಗಳನ್ನು ವಿವರಿಸಿ.

2. ನಮ್ಮ ಅನುಭವ ವಿಶ್ವ ಪ್ರವಾಹವಾಗಿ ಹರಿಯುತ್ತದೆ - ವಿವರಿಸಿ.
   1) ಬುದ್ಧಿಯ ಪ್ರವಾಹ
   2) ಭಾವನೆಯ ಪ್ರವಾಹ

3. ಅನುಭವದಲ್ಲಿ ಮೌಲ್ಯ ಅಂತರಂಗವೆಂದು - ನಮ್ಮ ಆಸಕ್ತಿಗಳು ಹೊಂದಾಣಿಕೆಯಿಂದ ಒಂದು ಸ್ಥಿರತೆಯ ಸ್ಥಿತಿಯನ್ನು ತಲುಪುವುದು.

4) ಬೆಳೆದ ಮನುಷ್ಯನ ಮನಸ್ಸು ಎಂತಹದ್ದು - ಸಾವಿರಾರು ಆಸಕ್ತಿಗಳ ಒಂದು

5) ಕವನದ ಮಹತ್ವವನ್ನು ಗುರುತಿಸಬೇಕಾದ ಗಮನಿಸಬೇಕಾದ ಅಂಶಗಳು (5 ಅಂ

6) "ನಮ್ಮ ಅಪೇಕ್ಷೆಗಳನ್ನು ಇಷ್ಟಾನಿಷ್ಟಗಳನ್ನು ಬೆಳೆಸುವುದು ಮನುಷ್ಯನಿಗೆ ಸಹ ವಾದ ಪ್ರವೃತ್ತಿ" ಈ ಹೇಳಿಕೆಯನ್ನು ಐ.ಎ. ರಿಚರ್ಡ್ಸ್ ವಿಚಾರಗಳಲ್ಲಿ ವಿಶ್ಲೇಷಿಸಿ. (ಉತ್ತರ:- ಭಾಗ-8- ಪ್ರಶ್ನೆ)

7) ಶ್ರೇಷ್ಠ ಕಾವ್ಯದ ಬಗ್ಗೆ ರಿಚರ್ಡ್ಸ್‌ನ ~~ವ್ಯಾ~~ ವ್ಯಾಖ್ಯೆ ಯಾವುದು ?

ಉ:- ಕಾವ್ಯ ಅತ್ಯುತ್ತಮ ಚಿತ್ತವೃತ್ತಿಗಳ ಅತ್ಯಂತ ಸುಖಮಯವಾದ ಕ್ಷಣ ಅಭಿವ್ಯಕ್ತಿ.

8) ಲೋಕೋಪಕಾರಿಯಾದ ಕ್ರಿಯೆಯ ಮೂಲ ಎಂದರೇನು? ಕಾವ್ಯ ಸಾಹಿತ್ಯ.
ಕಾವ್ಯಾನುಭವ.

9) ಕಾವ್ಯಾನುಭವದ ಎಷ್ಟು ವಿಧಗಳು? 3 ವಿಧಗಳು

10) ಕಾವ್ಯಾನುಭವದ ಮೂರು ವಿಧಗಳನ್ನು ಕೂಲಂಕುಷವಾಗಿ ವಿವರಿಸಿ.
(ಪುಟ - 140-141), 142 ಚಿತ್ರ ನೋಡಿ)

11) ಕಾವ್ಯದ ಅತ್ಯುತ್ತಮವಾದ ಸಾಧನೆ ಏನು? ನಮ್ಮ ಆಲೋಚನೆಗಳನ್ನು ಆಕಾಂಕ್ಷೆಗಳನ್ನು ಭಾವನೆಗಳನ್ನು ಒಂದು ಕ್ರಮದಲ್ಲಿ ನಿಲ್ಲಿಸಬಲ್ಲದ್ದು.

12) ಜೀವನ ಶ್ರೀಮಂತವಾಗುವುದು ಯಾವುದರಿಂದ — ಅನುಭವದ ವೈವಿಧ್ಯಗಳಿಂದ

13) ಭಾಷೆಯ ಬಳಕೆಯ ಎರಡು ವಿಧಾನಗಳು ಯಾವುವು?
1. ವೈಜ್ಞಾನಿಕ 2. ಭಾವವ್ಯಂಜಕ.

14) ಭಾಷೆಯ ಎರಡು ವಿಧಾನಗಳನ್ನು ಯಾರು ಗುರುತಿಸಿದ್ದಾರೆ? ಐ.ಎ. ರಿಚರ್ಡ್ಸ್

15) ಐ.ಎ. ರಿಚರ್ಡ್ಸ್‌ನ ಭಾಷೆಯ ಬಳಕೆಯ ಎರಡು ವಿಧಾನಗಳು? - ಆಕೃತಿ.

16) ಕಲೆಯ ಅನುಭವದ ಮೂಲ ಲಕ್ಷಣವೇನು? ಒಂದು ವಿಶಿಷ್ಟವಾದ ಹೊಸತನ
- ಕ್ರಿಯೆ or ಪ್ರತಿಕ್ರಿಯೆ.

17) ಸೌಂದರ್ಯಾನುಭವ ಎಂದರೇನು? ಸಮಷ್ಟಿ ಕಲಾನುಭವ

18) ಸೌಂದರ್ಯಾನುಭವವನ್ನು ಐ.ಎ. ರಿಚರ್ಡ್ಸ್ ಏನೆಂದು ಕರೆದಿದ್ದಾನೆ?
ಸಿನೆಸ್ಥೀಸ್

19) ಸಿನೆಸ್ಥೀಸ್ ಯಾವುದನ್ನು ಸಾಧಿಸಿ ನೀಡುತ್ತದೆ? ಒಂದು ವಿಶಿಷ್ಟವಾದ ಮನಸ್ಥಿತಿಯ -ನ್ನು

20) ಸಾಹಿತ್ಯ ವಿಮರ್ಶೆಯ ತತ್ವಗಳು ಕೃತಿಯ ಕರ್ತೃ - ಐ.ಎ. ರಿಚರ್ಡ್ಸ್

21) ಶ್ರೇಷ್ಠ ಕಾವ್ಯದ ಲಕ್ಷಣ ಯಾವುದು — ವಿಸಂಗತವಾದ ಅಂಶಗಳನ್ನು ಬೆಸೆಯುವ -ದರ ಮೂಲಕ ಕಾವ್ಯರಚನೆ ಮಾಡುವುದು.

22) ಜಾನ್ ಕ್ರೋರಾನ್ಸಮ್ ಯಾರು? — ವಿಮರ್ಶಕ

23) ಕವನಗಳಲ್ಲಿ ಪ್ರತಿನಿಧಿಸಲಾದ ಭಾವಗಳ ಸಮನ್ವಯತೆಗೆ ಸಾಧನಗಳು?
೧. ವಿಸಂಗತ ಅಂಶಗಳು

24) ವಿಮರ್ಶೆಯನ್ನು ದಾರಿ ತಪ್ಪಿಸುವ ಅಂಶಗಳಾವುವು?
→ ಕೃತಿಯ ಸಂಗ ನಿಷ್ಠುರತೆಯು ಕೆಲವರ ಅನುಮೋದಕತೆ

25) ಕಾವ್ಯದ ಸತ್ಯ ಯಾವ ಅರ್ಥದ ಮೂಲಕ ಸಿಕ್ಕುತ್ತದೆ? - ಕಲಾತ್ಮಕ ಕಾವ್ಯ

Scanned by CamScanner

26) ಕೃತಿಯ ಸತ್ಯ ಯಾವುದರಲ್ಲಿ ಅಡಗಿದೆ? – ಕೃತಿಯ ಅಂತರಂಗ ರಚನೆಯಲ್ಲಿ.

27) ಕೃತಿಯ ಒಳಗಿನ ಸತ್ಯವನ್ನು ನಿರ್ದೇಶಿಸಲು ಕೊಡುವ ಉದಾ:- ನಗ್ನ
ಸೋದಾಹರಣವಾಗಿ ವಿವರಿಸಿ ( ... ಕಿಂಗ್ ಲಿಯರ್) ಒಥೆಲೋ
(ಭಾಗ – ಪುಟ - 147-148) – ಷೇಕ್ಸ್‌ಪಿಯರ್‌ನ ನಾಟಕಗಳು

28) "ಕಾವ್ಯಕ್ಕೆ ಅರ್ಥವಿಲ್ಲ ಅದರ ಅದು ನಿರರ್ಥಕವಲ್ಲ ಅದರ ಮೌನದಲ್ಲಿ ಅರ್ಥ
ವು ತಾರ್ಕಿಕತೆ ಆಗಬೇಕು" ಇದು ಯಾರ ಹೇಳಿಕೆ -
– ಆರ್ಚಿಬಾಲ್ಡ್ ಮೆಕ್ಲಿಷ್

ಕೃತಿಯನ್ನು ಕುರಿತ
29) ಸ್ವಾಯತ್ತತೆ ವಾದ – ಬ್ಲ್ಯಾಕ್‌ಮರ್ (ಪುಟ – 149 – 150)
ಕೋಲರಿಡ್ಜ್ – ಬ್ಲ್ಯಾಕ್‌ಮರ್, ವಿಲಿಯಂ ಎಂಪ್ಸನ್, ರೂಪಾ ಕಲಂಬರ

30) ಕಲೆ ಮಾಡುವ ಕಾರ್ಯವೇನು? ನಮ್ಮ ಆವೇಗವನ್ನು ಹೊಂದಿಸಿ ತೃಪ್ತಿಗೊಳಿಸುವುದು.

31) ಐ.ಎ. ರಿಚರ್ಡ್ಸ್‌ನ ಮನಶಾಸ್ತ್ರೀಯ ಹಿನ್ನೆಲೆಯ ದೃಷ್ಟಿಕೋನದಲ್ಲಿ ಮೌಲ್ಯವನ್ನು
ವಿವರಿಸಿ.

32) ಸಾಹಿತ್ಯ ಕಾರ್ಯದ ವಿಶ್ಲೇಷಣೆಯಲ್ಲಿ ಮನಶಾಸ್ತ್ರ ವಿಧಾನಗಳನ್ನು ಮೊದಲು ಬಳಸಿ
– ಕೊಂಡವರು ಯಾರು – ಐ.ಎ. ರಿಚರ್ಡ್ಸ್

33) ಐ.ಎ. ರಿಚರ್ಡ್ಸ್‌ನ ಶಿಷ್ಯ ಯಾರು – ವಿಲಿಯಂ ಎಂಪ್ಸನ್

34) ವಿಲಿಯಂ ಎಂಪ್ಸನ್ ಬರೆದ ಗ್ರಂಥ – ಏಳು ಬಗೆಯ ಅರ್ಥ ಸಂದಿಗ್ಧಗಳು 19
ಪ್ರಕಟವಾಗಿ

35) ಸಂಕೀರ್ಣ ಶಬ್ದಗಳು ಈ ಕೃತಿಯ ಕರ್ತೃ – ವಿಲಿಯಂ ಎಂಪ್ಸನ್

36) ವಾಕ್ ಪ್ರಯೋಗದ ತತ್ತ್ವ ದರ್ಶನ ಕೃತಿಯ ಕರ್ತೃ – ಐ.ಎ. ರಿಚರ್ಡ್ಸ್

37) ವಾಕ್ ಪ್ರಯೋಗದ ತತ್ತ್ವ ದರ್ಶನ ಗ್ರಂಥದಲ್ಲಿ ರಿಚರ್ಡ್ಸ್ ನೀಡಿರುವ
ಶಬ್ದಾರ್ಥ ಸ್ವರೂಪವನ್ನು ಚರ್ಚಿಸಿ (ಚಿತ್ರ – ಪುಟ 154 – 155 ನ

38) ಸಂದರ್ಭ ಸಿದ್ಧಾಂತ ಕೃತಿಯಲ್ಲಿ ಅಡಕವಾಗಿರುವ ಅಂಶವೇನು? ತಾಂತ್ರಿಕ
ಶಬ್ದಾರ್ಥ ಸ್ವರೂಪ

39) ಕಾವ್ಯವನ್ನು ಅರ್ಥಮಾಡಿ ಕೊಳ್ಳುವ, ವಿಮರ್ಶೆ ಮಾಡುವ ಸಿದ್ಧಾಂತ ಆಧಾರಗ
ಮೂಲಾಂಶಗಳನ್ನು ವಿವರಿಸಿ (10 ಅಂಕದ ಪ್ರಶ್ನೆ ಪುಟ - 156 – 157 – 15

Scanned by CamScanner

40) ಸಂಕೀರ್ಣ ಶಬ್ದಗಳು — ಟಿಪ್ಪಣಿ (5 ಅಂಕಗಳು)

41) 'ವಾಕ್ ಪ್ರಯೋಗದ ತತ್ತ್ವದ ಕಡೆಗೆ' ಕೃತಿಯ ಕರ್ತೃ — ರಿಚರ್ಡ್ಸ್
(ಟಿಪ್ಪಣಿ - ಪುಟ - ಭಾಗ-12 .154)

42) ಐ.ಎ. ರಿಚರ್ಡ್ಸ್ ಶಬ್ದ ಸ್ವರೂಪವನ್ನು ವಿವರಿಸಿ.? (5 & 10 ಅಂಕದ ಪ್ರಶ್ನೆ)

43) 'ಸಂದರ್ಭ ಸಿದ್ಧಾಂತ' ಕೃತಿಯ ಪ್ರತಿಪಾದಕರು - ಐ.ಎ. ರಿಚರ್ಡ್ಸ್

43) ಐ.ಎ. ರಿಚರ್ಡ್ಸ್ ನ ಕಾವ್ಯ ವಿಮರ್ಶೆಯ ಸಿದ್ಧಾಂತದ ಮೂಲ ತತ್ತ್ವಗಳನ್ನು ಸಂಗ್ರಹಿಸಿ ಬರೆಯಿರಿ (10 ಅಂಕಗಳು)

44) ಕಾವ್ಯಾನುಭವದ ಮನಶ್ಶಾಸ್ತ್ರೀಯ ವಿಶ್ಲೇಷಣೆಯನ್ನು ರಿಚರ್ಡ್ಸ್ ನ ದೃಷ್ಟಿಕೋನ -ದಲ್ಲಿ ವಿವರಿಸಿ.

45) ರಿಚರ್ಡ್ಸ್ ಕಾವ್ಯ ಸಿದ್ಧಾಂತ ಬಗ್ಗೆ ಇರುವ ಆಕ್ಷೇಪಣೆಗಳನ್ನು ಕುರಿತು ಬರೆಯಿರಿ
(ಉತ್ತರ ಪುಟ - 162- 163) - ಸಮಾರೋಪ.

46) ಕ್ರೋಚೆ - ಟಿಪ್ಪಣಿ (5 ಅಂಕದ ಪ್ರಶ್ನೆ)

Scanned by CamScanner

ಹ್ಯಾಂಗಾರೆ ಕುಣಿಕುಣಿದು
ಮಂಗಾಟ ನಡೆದಾಗ
ಅಂಗಾತ ಬಿತ್ತೋ, ಹೆಗಲಲಿ ಎತ್ತೋ

ನವೋದಯ ಕವಿಗಳಲ್ಲಿ ಕೇವಲ ನವಿರಾದ ರಮ್ಯ ಭಾವಗಳೇ ಕಾವ್ಯದ ವಸ್ತುಗಳಾಗುತ್ತಿದ್ದವು. ಅವರು ಬದುಕಿನ ಒಂದು ಮುಖವನ್ನು ಮಾತ್ರವೇ ನೋಡುತ್ತಾ ವಾಸ್ತವದ ಕಟುಸತ್ಯಗಳನ್ನು ಮರೆತರು, ಅತಿ ಭಾವುಕತೆಯಿಂದಾಗಿ ಸಾಹಿತ್ಯ ಎನ್ನುವುದು ಕೇವಲ ಭ್ರಮಾಲೋಕ ಎನಿಸುವಂತೆ ಮಾಡಿದರು ಎಂಬಂತಹ ಆರೋಪಗಳನ್ನು ನಿರಾಕರಿಸುವ ನಿದರ್ಶನವಾಗಿ ಎತ್ತಿ ತೋರಿಸುವ ಕವನಗಳಲ್ಲಿ ಬೇಂದ್ರೆಯವರ ಕುರುಡು ಕಾಂಚಾಣ ಮೊದಲ ಸಾಲಿನಲ್ಲೇ ಬರುವಂಥಾದ್ದು.

ಇಡೀ ಕವನ ಗೊಂದಲಿಗರ ಕುಣಿತದ ವೇಷ ಹಾಗೂ ಧಾಟಿಯನ್ನು ಬಡತನದ ಭೂತನೃತ್ಯವಾಗಿ ಕಾಣುತ್ತದೆ. ನಮ್ಮ ಸಂಪತ್ತು ಸಮಾಜದ ಎಲ್ಲರಿಗೂ ಸಮಾನವಾಗಿ ಹಂಚಿಕೆಯಾಗಲು ಸಾಧ್ಯವಿಲ್ಲದ ಸ್ಥಿತಿಯೊಂದಿದೆ. ಹಣ ಅವಶ್ಯತೆಗಳನ್ನು ಪೂರೈಸುವ ಸಾಧನವಾಗಿ ಮಾತ್ರ ಉಳಿಯದೆ ಅವಶ್ಯಕತೆಗಳನ್ನೇ ಹಿಗ್ಗಿಸುತ್ತಾ ಹೋಗುವ ವ್ಯವಹಾರವಾಗುತ್ತದೆ. ಈ ದುರಾಸೆಗೆ ಮಿತಿ ಸಾಧ್ಯವಿಲ್ಲ. ಇದಕ್ಕೆ ಯಾವ ಬಗೆಯ ತಡೆಯೂ ಇಲ್ಲ. ಮೌಲ್ಯಗಳಿಗೆ ಬೆಲೆಯೇ ಇಲ್ಲ. ಮನುಷ್ಯ ಸಂಬಂಧಗಳಿಗೆ ಅರ್ಥವೇ ಇಲ್ಲ. ಎಲ್ಲರನ್ನೂ ಬಡಿದು ಕೊಂದಾದರೂ ಸರಿ, ಸಾಧ್ಯವಾದಷ್ಟನ್ನೂ ದೋಚಿ ಸಂಗ್ರಹಿಸುವಲ್ಲೇ ಮನಸ್ಸು ಲೀನವಾಗುತ್ತದೆ. ದುರ್ಬಲರನ್ನು ಕಂಡಾಗ ಈ ಆಕ್ರಮಣ ನಿರ್ದಾಕ್ಷಿಣ್ಯವಾಗಿ ತೀವ್ರವಾಗುತ್ತದೆ. ಕಾಂಚಾಣದ ಭೂತನೃತ್ಯದ ಪದಗತಿಗೆ ಎಷ್ಟು ವಿಶಾಲ ವೇದಿಕೆಯಾದರೂ ಸಾಲದು. ಮೈಮರೆತು ನರ್ತಿಸುತ್ತಾ ಎದುರು ಬಂದವರನ್ನೆಲ್ಲಾ ತುಳಿಯುತ್ತಲೇ ಸಾಗುತ್ತದೆ.

ಹತ್ತಾರು ಮಂದಿಯ ಎದೆಯ ಮೇಲೆ ನಡೆದುಹೋಗಿಯೇ ಶ್ರೀಮಂತರಾಗಲು ಸಾಧ್ಯ. ದಯೆ ದಾಕ್ಷಿಣ್ಯ, ಮಾನವೀಯತೆ ಈ ಮಾತುಗಳೆಲ್ಲ ಅರ್ಥಹೀನವಾದಾಗ ಮಾತ್ರವೇ ಲಕ್ಷ್ಮಿ ಒಲಿದಾಳು. ಶೋಷಣೆ ಪಾಪದ ಯಾವ ಪ್ರಜ್ಞೆಯನ್ನೂ ತರದೆ ಆರಾಧನೆಯ ಧನ್ಯತೆಯನ್ನು ತುಂಬುತ್ತದೆ. ಮೈದುಂಬಿದ ನರ್ತನಕ್ಕೆ ತೊಡಗುತ್ತದೆ. ಈ ನರ್ತನಕ್ಕೆ ಒದಗಿಬರುವ ವೇಷಭೂಷಣಗಳ ವಿವರಗಳು ಮೈ ನಡುಗಿಸುವಂತಹವು. ಗೆಜ್ಜೆ, ಜೋಮಾಲೆ, ಕೈಯೊಳಗಿನ ಪಂಜು, ಹಣೆಗೆ ಹಚ್ಚಿದ ಭಂಡಾರ, ಅದರ ಲಯಕ್ಕೆ ಒದಗಿಬರುವ ಹಾಡು, ಹಾಡಿನ ದಾಟಿ ಎಲ್ಲವನ್ನೂ ಕಂಡಾಗ ಈ ಕುಣಿತ ಹೀಗೆ ಕೊನೆಯಿಲ್ಲದೆ ನಡೆಯುತ್ತದೆಯೇ ಎಂಬ ಅನುಮಾನ ಬರುತ್ತದೆ. ಎಲ್ಲೋ ಒಂದು ಮೂಲೆಯಲ್ಲಿ ಕುಣಿಯುವುದಕ್ಕೆ ಬೇಕಾದ ಶಕ್ತಿಗೂ ಒಂದು ಮಿತಿ ಇರಲಾರದೇ

CS Scanned with CamScanner

ಎನಿಸುತ್ತದೆ. ಕುಣಿಯುವ ಇಚ್ಛೆ ಮುಗಿಯದಿರಬಹುದು. ಆದರೆ ದಣಿದು ಸಾಕಾಗಿ ತಾಳ ತಪ್ಪಿ ಬೀಳಬಾರದೇ ಎಂಬ ಆಶಾಕಿರಣ ಕಾಣುತ್ತದೆ.

ಅಥವಾ ಶತಮಾನಗಳ ಮಾನವ ಚರಿತ್ರೆಯಲ್ಲಿ ಹೀಗೂ ಅನಿಸುತ್ತದೆ. ಇದು ಸಿರಿತನದ ವಾಸ್ತವ ಕುಣಿತವಲ್ಲ. ಬಡವನೇ ಹೀಗೆ ವೇಷಕಟ್ಟಿ ಕುಣಿಯುತ್ತಿದ್ದಾನೆಯೇ? ಈ ಅಗತ್ಯ ಅವನಿಗೆ ಒದಗಿದೆ. ಕಾಂಚಾಣದ ತುಳಿತದ ತಾಳದ ಗತಿ ಮತ್ತಷ್ಟು ತೀವ್ರವಾಗುತ್ತಾ ನಡೆದಿರುವುದು ಕಾಣುತ್ತಿದೆಯೇ ಹೊರತು ನಿಲ್ಲುವ ಸೂಚನೆ ಖಂಡಿತಾ ಇಲ್ಲ. ನಿರಂತರವಾದ ಓಟದಲ್ಲಿ ಪಾಲ್ಗೊಳ್ಳುವವನು ಒಬ್ಬ ವ್ಯಕ್ತಿಯಲ್ಲವಲ್ಲ. ಅವನ ಸಾಲಿನ ನೇರದಲ್ಲಿರುವವನಿಗೆ ಈ ಓಟ ವರ್ಗಾವಣೆಯಾಗುತ್ತಾ ಆಗುತ್ತಾ ನಿಲ್ಲದೆ ಸಾಗುತ್ತದೆ. ಹಾಗಾದರೆ ಕಾಲಚಕ್ರದ ಗತಿ ಎಂಬುದು ಸುಳ್ಳೇ? ಒಂದಲ್ಲ ಒಂದು ದಿನ ಮೇಲು ಕೀಳು ಎಂಬುದರ ಸ್ಥಾನಪಲ್ಲಟವಾಗುವುದಿಲ್ಲವೇ? ಚಕ್ರದ ಗತಿಯಲ್ಲಿ ತನ್ನ ಸರದಿಯನ್ನು ಕಾಯುತ್ತಾ ಸುತ್ತುವವನಿಗೆ ಎಂದೂ ಸರದಿ ಬರುವ ಸಂಭವ ಕಾಣುತ್ತಿಲ್ಲ ಸರದಿ ಹಂಚಿಕೆಯಾಗುತ್ತಿರುವುದು ನೇರ ಸಾಲಿನಲ್ಲಿ. ಹಾಗೆಂದು ಚಕ್ರದ ಗತಿಯಿಂದ ಬಿಡಿಸಿಕೊಂಡು ಸಾಲಿನ ನೇರಕ್ಕೆ ಬಂದು ನಿಂತು ಬಿಡುತ್ತೇನೆ ಎಂದರೆ ಅದು ಸಾಧ್ಯವಿಲ್ಲ. ಅದನ್ನು ಅಕ್ರಮ ಪ್ರವೇಶವೆಂದು ಭಾವಿಸಲಾಗುತ್ತದೆ. ಈ ಉದ್ದದ ಸರಣಿಯ ಕೊನೆಗಾದರೂ ನಿಂತು ಕಾಯುತ್ತೇನೆಂದರೆ ಸರಣಿಗೆ ಕೊನೆಯೇ ಇರುವಂತಿಲ್ಲ. ಸರಣಿಗೆ ಸೇರಲೇಬೇಕೆಂಬ ಆಸೆಯನ್ನು ಪೂರೈಸಿಕೊಳ್ಳುವುದು ಹೇಗೆ?

ವಾಸ್ತವದಲ್ಲಿ ಸಾಧ್ಯವಿಲ್ಲದ್ದನ್ನು ವೇಷಹಾಕಿಯಾದರೂ ಅನುಭವದ ಭಾಸವನ್ನು ತಂದುಕೊಳ್ಳುವುದೊಂದೇ ಉಳಿದ ದಾರಿ. ತುಳಿಸಿಕೊಳ್ಳುತ್ತಲೇ ಬದುಕಬೇಕಾದವನು ತುಳಿಯುವವನಂತೆ ಆರ್ಭಟಿಸಿ ಕುಣಿದು ದಣಿಯುತ್ತಾನೆ. ತಾನುಂಡ ನೋವುಗಳನ್ನೇ ವೇಷವಾಗಿ ಧರಿಸಿ ಒಳಗಿನ ಕಿಚ್ಚನ್ನು ಹೊರಹಾಕಲು ಪ್ರಯತ್ನಿಸುತ್ತಾನೆ. ಬದುಕಿನಲ್ಲಿ ಪಡೆಯಲಾಗದ್ದನ್ನು ಆಚರಣೆಯ ಅಂಗವಾಗಿ ಮಾಡಿಕೊಂಡು ವೇಷಹಾಕಿ ಕುಣಿದು ಪಡೆಯುತ್ತಾನೆ. ಇವನ ಈ ಆರಾಧನೆಗೆ ಆ ಲಕ್ಷ್ಮಿ ಒಲಿಯುವವಳೇನಲ್ಲ. ಆದರೆ ಇವನ ಭ್ರಾಂತಿ ಇವನಿಗೆ ತಪ್ಪಿದ್ದಲ್ಲ.

ಗೊಂದಲಿಗರ ಕುಣಿತದ ವೇಷದಂತಹ ಒಂದು ಸಾಮಾಜಿಕ ಆಚರಣೆಯ ಆಳದಲ್ಲಿ ಹುದುಗಿರುವ ಶೋಷಿತರ ಆಳದ ನೋವಿನ ಚಿತ್ರಣವನ್ನು ಕವಿತೆ ಕಟ್ಟಿಕೊಡುತ್ತದೆ. ಪ್ರಚಲಿತ ಎಷ್ಟೋ ಆಚರಣೆಗಳು ಪ್ರಸ್ತುತಕ್ಕೆ ಅರ್ಥಹೀನವೆಂದು ಕಂಡುಬಂದಾಗ, ಅದರ ನಿರರ್ಥಕತೆಯನ್ನು ಎತ್ತಿ ಸಾರಿ ಅವುಗಳನ್ನು ವಿರೋಧಿಸಿ ನಿರಾಕರಿಸಬೇಕಾದ್ದು ಅತ್ಯಂತ ಸೂಕ್ತವೆಂದು ತೋರುವಾಗಲೇ ಆ ಆಚರಣೆಗಳ ಸಾಮಾಜಿಕ ಹಾಗೂ ಮನೋವೈಜ್ಞಾನಿಕ ಅಧ್ಯಯನದಿಂದ ಗೋಚರವಾಗುವ ಇಂತಹ ಸತ್ಯದ ದರ್ಶನದ ಎದುರು ಓದುಗ ಮಾತು ಕಳೆದು ನಿಲ್ಲುತ್ತಾನೆ.

– ಎಚ್.ಎಸ್. ಶ್ರೀಮತಿ

ದ್ವಿತೀಯ ಬಿ.ಎ. ಐಚ್ಛಿಕ ಕನ್ನಡ
ಕಲ್ಕಿ ಕವಿತೆಯ
ಪ್ರಾಂಶುಪಾಲಕ ವಿ ಮುಕ್ತಿ



ಎಲುಬಿನ ಕುದುರೆಯು ಕೆನೆಯುತ್ತಿತ್ತು;
ನಾದವು ಬೊಮ್ಮನ ಬಿರಿವಂತಿತ್ತು!
ಎಲುಬಿನ ಮೂರ್ತಿಯು ಗಹಿಗಹಿಸಿತ್ತು;
ಗುಡುಗಿನ ಮಾಲೆಯ ಪೊರಮಡುತಿತ್ತು!
ಕುದುರೆಯೂ ಕುಡಿದೂ, ಆಳೂ ಕುಡಿದೂ
ತಿಂದರು ಶವಗಳ ಲಠಿಲಠಿ ಕಡಿದೂ!
ಬತ್ತಿತು ರಣಧುನಿ; ಇನ್ನೂ ದಾಹ!
ಮುಗಿದುವು ಹೆಣಗಳು, ಇನ್ನೂ ಹಸಿವೆ
ಬಡವರ ಗಂಟಲು ಬೇಗೆಯ ದಾಹ!
ಬಡವರ ಹೊಟ್ಟೆಯ ಬೆಂಕಿಯ ಹಸಿವೆ!
ತುಂಬದೊ ಹೊಟ್ಟೆ;
ತುಂಬದು ಹೊಟ್ಟೆ!
ಕೆಟ್ಟೇ! ಕೆಟ್ಟೇ!
ಅಯ್ಯೋ ಕೆಟ್ಟೇ!
ಕಲ್ಕಿ
ನೋಡಿದನೆನ್ನಂ ಬೆಟ್ಟದ ಮೇಲೆ!
ಬರುತಿಹನಯ್ಯೋ ಒಲ್ಲೇ! ಒಲ್ಲೆ!
ನೋಡುತಲಿದ್ದೆ!
ಕಂಪಿಸಿ ಬಿದ್ದೆ ಕಲ್ಕಿ! ಕಲ್ಕಿ! ಎನ್ನುತ ಚೀರಿ
ಕನಸೊಡೆದೆದ್ದೆ!
ಇನ್ನೆಲ್ಲಿಯ ನಿದ್ದೆ?

★★★

ದ್ವಾಪರಯುಗದ ನಂತರದ ಈ ಕಲಿಯುಗದಲ್ಲಿ 'ಕಲ್ಕಿ' ಅವತಾರ ಪುರುಷನಾಗಿ ಬರುತ್ತಾನೆ ಎಂಬುದು ಪುರಾಣಗಳ ನಂಬಿಕೆ, ಕುವೆಂಪು ಅವರ ಈ ಕಲ್ಕಿಯನ್ನು ನಮ್ಮ ನಡುವಿನಿಂದಲೇ ಸೃಷ್ಟಿಸುವ ಮೂಲಕ ಅವತಾರಗಳ ಕಲ್ಪನೆಗೆ ಹೊಸ ಸಾಧ್ಯತೆಯನ್ನು ತಂದು ಕೊಡುತ್ತಾರೆ. ಗಾಢ ನಿದ್ದೆಯಲ್ಲಿದ್ದ ಕವಿಗೆ ಮನಸ್ಸಿನಲ್ಲಿ ಕಾಣಿಸಿಕೊಳ್ಳುವ ಕಲ್ಕಿಯ ಭಯಾನಕ ಅವತಾರ ಮತ್ತೆ ನಿದ್ದೆ ಮಾಡಲಾರದ ಸ್ಥಿತಿಗೆ ಕವಿಯನ್ನು ದೂಡುತ್ತದೆ. 'ನಿದ್ದೆ', 'ಕನಸು' ಮತ್ತು 'ಎಚ್ಚರ'ಗಳ ನಡುವಿನ ಈ ನಾಟಕೀಯ ದೃಶ್ಯಾವಳಿಗಳು

ಆರಂಭವಾಗುವುದೇ ಕವಿಗೆ ಪ್ರಿಯವಾದ ಅನಂತವನ ವಿಸ್ತೀರ್ಣವನ್ನು ಪ್ರವೇಶಿಸುವ ಮೂಲಕ. ಪ್ರಕೃತಿಯ ಆರಾಧಕರಾದ ಕುವೆಂಪು ತಮ್ಮ ಪ್ರಕೃತಿ ಪ್ರಧಾನ ಕವಿತೆಗಳಲ್ಲಿ ಆನಂದದ 'ಹುಚ್ಚು' ಹಿಡಿಸಿಕೊಂಡು ಪ್ರಾಕೃತಿಕ ಜಗತ್ತಿನಲ್ಲಿ ಶಿವದರ್ಶನವನ್ನು ಕಾಣುತ್ತಾ ಆಧ್ಯಾತ್ಮದ ಅನಂತಕ್ಕೆ ಒಯ್ದುದ್ದೂ ಉಂಟು. ಇಂಥ ಸಂದರ್ಭಗಳಲ್ಲೆಲ್ಲಾ ಭಾವಪರವಶರಾಗಿ ಆಧ್ಯಾತ್ಮಕ್ಕೆ ತೊಡಗಿಸಿಕೊಳ್ಳುತ್ತಿದ್ದ ಕವಿ, ಇಲ್ಲಿ ಪ್ರಕೃತಿ ಜೊತೆಗಿನ ಪರವಶತೆಯನ್ನು ಬಿಡಿಸಿಕೊಂಡು ತನ್ನ ಸಾಕ್ಷಾತ್ಕಾರದ ತಾಣ ಎಂದು ನಂಬಿದ ಮಲೆನಾಡಿನ ಆ ಶಿಖರದಲ್ಲೂ ಅಸಮಾನತೆಯ ವಿಪರ್ಯಾಸವನ್ನು ಕಾಣತೊಡಗುತ್ತಾರೆ.'' ಅವರ ಕನಸಿನ ಲೋಕದ ಆ ಅರಣ್ಯಾವೃತ ಕಿಕ್ಕಿರಿದ ಹೆಮ್ಮರಗಳ ನಡುವೆ ಕವಿಗಳಲ್ಲಿ ಕಾಣುತ್ತಿರುವುದು ಹೆಣೆದ ಬಳ್ಳಿ, ಪೊದೆ ಮುಳ್ಳು, ಗರಗಸವಳ್ಳಿ ಮತ್ತು ಪ್ರೇತದಂಥ ಪಾಪಾಸಿನ ಕಳ್ಳಿ. ಆ ಅರಣ್ಯ ಮಾಲೆಯ ಯಾವುದೋ ಒಂದು ಮುಗಿಲಿನ ಮಟ್ಟ ನಿಂತ ಶಿಖರದಲ್ಲಿಯೇ ಈ ಜಗತ್ತಿನ ಎಲ್ಲ ವೈರುಧ್ಯಗಳನ್ನೂ ಕವಿ ಕಾಣತೊಡಗುತ್ತಾರೆ. ಅಸಮಾನತೆಯ ಕ್ರೂರ ಬದುಕು ತನ್ನ ರೋಗದ ಹೆಡೆಗಳನ್ನು ಬಿಚ್ಚಿ ನರ್ತಿಸತೊಡಗುತ್ತದೆ. ಹಾಡು ಮತ್ತು ಗೋಳು, ಹಸಿವು ಮತ್ತು ಸಂತೃಪ್ತಿ, ಉದ್ಯಾನ ಮತ್ತು ಸ್ಮಶಾನಗಳು ಒಂದೇ ಕಣ್ಣಳತೆಯಲ್ಲಿ ಏಕಕಾಲಕ್ಕೆ ಗೋಚರಿಸುತ್ತ ಕವಿಯನ್ನು ನಿಬ್ಬೆರಗಾಗಿಸುತ್ತವೆ. ಕವಿ ಇದನ್ನು 'ಮಾಯದ ಊರು' ಎಂದು ಕರೆಯುವ ಮೂಲಕ ಒಂದೇ ಊರಿನಲ್ಲಿ ಇಂತ ವಿಪರ್ಯಾಸ ಸಾಧ್ಯವೇ ಎಂದು ಹಲಬುತ್ತಿರುವಂತಿದೆ. ಅದು ಮಾಯದ ಊರೇ. ಏಕೆಂದರೆ ಅಂಥ ಅಸಮಾನತೆಯ ವಿರುದ್ಧ ವಾಸ್ತವದಲ್ಲಿ ಘಟಿಸಿದ್ದು ಅಲ್ಲಿ ಘಟಿಸುತ್ತದೆ. ಗೋಳುಂಡ ಜನರ ಹಸಿವಿನ ಜಠರಾಗ್ನಿ ಕಟ್ಟೆಯೊಡೆದು ಸ್ಫೋಟಿಸಿದೆ. ತನ್ನ ಕೆನ್ನಾಲಿಗೆಯನ್ನು ಪಿಶಾಚಿಯಂತೆ ಚಾಚಿದೆ. ಆದರೆ ಅದು ಕೇವಲ ಶ್ರೀಮಂತರ ಕಡೆಗೆ ಮಾತ್ರವಲ್ಲ. ಈ ಅಸಮಾನತೆಗೆ ಘೋಷಣೆ ನೀಡುವ ಮೂಲಕ ಹಿನ್ನೆಲೆಯಲ್ಲಿ ನಿಂತು ಗಹಗಹಿಸುವ ಕಾವಿಧಾರಿಗಳು ಮತ್ತು ಅವರ ಮಠಗಳು, ಮೌಢ್ಯವನ್ನೇ ಬಿತ್ತಿದ ಪುರೋಹಿತಶಾಹಿಗಳು ಮತ್ತು ಅವರ ಗುಡಿಗೋಪುರಗಳು ಎಲ್ಲವೂ ಆ ಕರಾಳ ಅಗ್ನಿಗೆ ಆಹುತಿಯಾಗಿವೆ. ಇಷ್ಟೇ ಅಲ್ಲ, 'ದೂರದ ಆ ಗಿರಿಶಿಖರದ ಮೇಲೆ ನನಗೂ ತಟ್ಟಿತು ಬೆಂಕಿಯ ಜ್ವಾಲೆ' ಎಂಬ ಮಾತಿನಲ್ಲಿ ಅದು ತನ್ನಂಥ ಮಧ್ಯಮ ವರ್ಗವನ್ನೂ ಬಿಟ್ಟಿಲ್ಲ ಎಂಬ ಧ್ವನಿ ಇದೆ. ಕವಿ, ಶೋಷಕರ ವರ್ಗದಲ್ಲಿ ತನ್ನನ್ನೂ ಗುರುತಿಸಿಕೊಳ್ಳುವ ಮೂಲಕ ಆತ್ಮ ನಿರೀಕ್ಷೆಯನ್ನೂ ಇಲ್ಲಿ ಮಾಡಿಕೊಡುತ್ತಾರೆ. ಕಡೆಗೆ ಆ ಬೆಂಕಿ ಗರ್ಭಿಣಿಯರು, ಬಾಣಂತಿಯರು, ಕಿವುಡರು, ಕುಂಟರು ಮೊದಲಾಗಿ ಯಾರನ್ನೂ ಬಿಡುವುದಿಲ್ಲ. ಅಂದರೆ ಅಸಮಾನತೆಗೆ ಕಾರಣರಾದವರು ಹಾಗೂ ಅದನ್ನು ಒಪ್ಪಿಕೊಂಡವರು ಎಲ್ಲರೂ ಇದಕ್ಕೆ ಬಲಿಯಾಗುತ್ತಾರೆ. ನಂತರ ಬರುವ ರಕ್ತದ ಜಲಪಾತದ ದೃಶ್ಯದಲ್ಲಿ 'ಸುಂದರಿಯರ ತಲೆ ಮಂಡೆಗಳು, ಶ್ರೀಮಂತರ ನೆಣದುಂಡೆಗಳು, ಪಾಪದ ದೇಹ,

ಪುಣ್ಯದ ದೇಹ, ಗುಡಿಗೋಪುರಗಳು, ಧರ್ಮದ ಗೇಹ' ಎಲ್ಲವೂ ಕಸಕಡ್ಡಿಗಳಂತೆ ಕೊಚ್ಚಿಹೋಗುತ್ತವೆ. ಅಂದರೆ ಒಂದಿಷ್ಟು ಒಂದನ್ನು ಸುಧಾರಿಸುವ ಮೂಲಕ ಈ ವ್ಯವಸ್ಥೆಯನ್ನು ಹಸನುಗೊಳಿಸಲು ಸಾಧ್ಯವಿಲ್ಲ. ಒಳ್ಳೆಯದು ಕೆಟ್ಟದ್ದೆಂದು ವಿಂಗಡಿಸಲೂ ಸಾಧ್ಯವಿಲ್ಲದಂಥ ಹೊಲಸೇ ತುಂಬಿ ಹೋದ ಈ ದುರ್ನಾತದ ವ್ಯವಸ್ಥೆ ಸುಧಾರಣೆಗೆ ಒಗ್ಗದ್ದು ವ್ಯವಸ್ಥೆಯ ಮೂಲೋತ್ಪಾಟನೆಯೇ ಇದಕ್ಕೆ ತಕ್ಕ ಮದ್ದು, ಸಮಗ್ರ ಕ್ರಾಂತಿಯೊಂದೇ ಇದಕ್ಕೆ ಸೂಕ್ತ ಪರಿಹಾರ ಎಂಬ ಕವಿಯ ಸ್ಪಷ್ಟ ಅಭಿಪ್ರಾಯ ಇಲ್ಲಿ ನಿಚ್ಚಳವಾಗಿರುತ್ತದೆ. ಸರ್ವನಾಶದ ನಂತರ ಹುಟ್ಟುವ ಸಮಾನತೆಯ ಹಸನು ವ್ಯವಸ್ಥೆಗೆ ಕವಿ ಇಲ್ಲಿ ಕಾತರಿಸುತ್ತಾರೆ.

ಇಲ್ಲಿ ಅವತರಿಸುವ ಕಲ್ಕಿ ನಮ್ಮ ಪುರಾಣಗಳ ಕಲ್ಪನೆಯ ಅವತಾರಿಯ ಹಾಗೆ ರಕ್ತ ಮಾಂಸ ತುಂಬಿದ ಸುಪುಷ್ಟ ಸುಂದರವಾದ ಅಭಯಹಸ್ತದ ಹಸನ್ಮುಖಿ ಮೂರ್ತಿ ಅಲ್ಲ. ಪರಮಾನ್ನ ಉಂಡ ಜನರು ಮಾತ್ರ ಕಲ್ಪಿಸಿಕೊಂಡ ಅವತಾರಗಳೇ ಇಲ್ಲಿಯವರೆಗೆ ಆಗಿ ಹೋದವು. ಆದರೆ ಕುವೆಂಪು ಸೃಷ್ಟಿಯ ಈ ಕಲ್ಕಿ ಹಸಿವಿನ, ಅವಮಾನದ, ಗೋಳಿನ ಪ್ರತೀಕ. ಆದ್ದರಿಂದಲೇ ಅವನು ಹೇಗೆ ಎಲುಬಿನ ಆಳೋ ಹಾಗೆಯೇ ಅವನ ಕುದುರೆಯೂ ಎಲುಬಿನದ್ದು. ಕೈಲಿ ಮಿಂಚಿನ ಕತ್ತಿ, ಸಿಡಿಲಿನ ಬುತ್ತಿ ಹೊತ್ತ ಇವನ ಶತಮಾನಗಳ ಹಸಿವು ಎಂಥದ್ದೆಂದರೆ ಯಾವ ರಕ್ತ, ಎಷ್ಟು ರುಂಡಮುಂಡ ಏನೆಲ್ಲವೂ ಅದನ್ನು ಇಂಗಿಸಲಾರವು. ಇವನ ಗುರಿ, ಸಮಾನವಲ್ಲದ ಈ ಜಗತ್ತಿನ ಸರ್ವಭಕ್ಷಣೆ. ಯಾರನ್ನೂ ಬಿಡಲೊಲ್ಲದ ಅವನ ಕಣ್ಣಿಗೆ ಕಡೆಗೆ ಕವಿಯೂ ಬೀಳುತ್ತಾನೆ. ಆ ಭಯಾನಕ ಮೂರ್ತಿಯ ಆಪೋಷನಕ್ಕೆ ಸಿಗುವ ಮುನ್ನ ಕವಿಗೆ ಕನಸೊಡೆಯುತ್ತದೆ. ಆದರೆ, ಆ ಕಟ್ಟಕಡೆಯ 'ಇನ್ನೆಲ್ಲಿಯ ನಿದ್ದೆ?' ಎಂಬ ಸಾಲು ಕವಿತೆಯ ಆರಂಭದಲ್ಲಿನ 'ನಿದ್ದೆಯ ಲೋಕ'ವೆಂಬ ಪದದ ಜೊತೆಗೆ ಸಂಬಂಧ ಪಡೆಯುತ್ತದೆ. ಇದುವರೆಗೆ ಇಂಥ ವಿಪರ್ಯಾಸದ ಅಸಮ ಜಗತ್ತನ್ನು ಕಂಡೂ ಅಜ್ಞಾನದಿಂದ ಇದ್ದ ಕವಿ ಇನ್ನು ಅಂಥ ಜಡತೆಯಲ್ಲಿ ಇರಲಾರ; ಅಂಥ ಕಣ್ಣು ಮುಚ್ಚಿದ ಸ್ಥಿತಿಯಿಂದ ಕಣ್ಣುತೆರೆದ ಸ್ಥಿತಿಗೆ ಕವಿ ಬಂದು ನಿಂತಿದ್ದಾರೆ. ಹಸಿವನುಂಡ ಮತ್ತು ಹಸಿವನ್ನೇ ಉಣ್ಣುತ್ತಿರುವ ಎಲ್ಲರೂ ಮೌಢ್ಯಕ್ಕೆ ಶೋಷಣೆಗೆ ಈಡಾದವರೆಲ್ಲರೂ ಇಂಥ ಎಚ್ಚರಕ್ಕೆ ಕಣ್ಣು ತೆರೆಯಬೇಕೆಂಬುದೇ ಕವಿಯ ಇಲ್ಲಿನ ಆಶಯ. ಶತಮಾನಗಳುದ್ದಕ್ಕೆ ಗಟ್ಟಿಗೊಳ್ಳುತ್ತಲೇ ಬಂದ ಅಸಮಾನತೆಯೇ ಪಾಪದ ಮೂಟೆ ತುಂಬಿಕೊಳ್ಳುತ್ತಲೇ ಇದೆಯೇ ಹೊರತು ವಿಮೋಚನೆಯ ಲವಲೇಶ ದಾರಿಯೂ ಕಾಣುತ್ತಿಲ್ಲವಲ್ಲ ಎಂಬ ಕಳವಳದ ಪ್ರತೀಕವೇ ಇಂಥ ಕವಿತೆಯ ರಚನೆಗೆ ನಾಂದಿಯಾಗಿದೆ.

"ಶ್ರೀಸಾಮಾನ್ಯನೆ ಭಗವದ್ ಮಾನ್ಯಂ ಶ್ರೀ ಸಾಮಾನ್ಯನೆ ಭಗವದ್ ಧನ್ಯಂ" ಎಂದು ನಂಬಿದ ಕುವೆಂಪು ಇಂಥ ಕೊಳೆತ ವ್ಯವಸ್ಥೆಯ ಮೂಲೋತ್ಪಾಟನೆ ಬಡವನಲ್ಲಿ

ಮೂಡುವ ಸೃಷ್ಟಿ ಮತ್ತು ಆ ಮೂಲಕವಾದ ಎಚ್ಚರದಿಂದ ಮಾತ್ರ ಸಾಧ್ಯವಾಗುತ್ತದೆಂಬ ನಂಬಿಕೆ ವ್ಯಕ್ತಪಡಿಸುತ್ತಾರೆ. ಬಡವನ ಆ ಆಶಯವೇ ಅವತಾರವಾಗಿ ಆವಿರ್ಭವಿಸುತ್ತದೆಯೇ ಹೊರತು ಪುರಾಣದ ಮೂರ್ತಿ ಅಲ್ಲ ಎಂಬ ದರ್ಶನ ಈ ಕವಿತೆಯಲ್ಲಿದೆ.

ಕುವೆಂಪುರವರಲ್ಲಿ ಕಾಣಬಹುದಾದ ಮತ್ತೊಂದು ವಿಶೇಷವೆಂದರೆ ಅವರ ಪ್ರಕೃತಿ ಗೀತೆಗಳ ಭಾಷೆಗೂ, ಇಂಥ ವೈಚಾರಿಕ ಕವಿತೆಗಳ ಭಾಷೆಗೂ ಇರುವ ವ್ಯತ್ಯಾಸ. ಅಲ್ಲಿ ಸಂಸ್ಕೃತ ಭೂಯಿಷ್ಠ ಘನಗಂಭೀರ ಭಾಷೆಯ ಮೋಹಕ್ಕೆ ಒಳಗಾಗುವ ಕವಿ ಇಂಥ ಕಡೆ ಆ ನೊಗವನ್ನು ಬಿಡಿಸಿಕೊಂಡು, ಸ್ವಲ್ಪ ವಾಚಾಳಿ ಅನ್ನಿಸಿದರೂ ಸರಳತೆಗೆ ಒತ್ತು ಕೊಡುತ್ತಾರೆ. ಇಲ್ಲಿ ನಿದ್ರೆ 'ನಿದ್ದೆ'ಯಾಗುತ್ತದೆ. ಅಗ್ನಿ 'ಬೆಂಕಿ'ಯಾಗುತ್ತದೆ. ನೆತ್ತರು 'ರಕ್ತ'ವಾಗುತ್ತದೆ. ಭಾಷೆ ವ್ಯಂಗ್ಯ ಮತ್ತು ನಾಟಕೀಯವಾಗುವ ಮೂಲಕ ಮನಸ್ಸು ರಂಗಭೂಮಿಯನ್ನು ಕಲ್ಪಿಸಿಕೊಳ್ಳಲು ಎಡೆ ಮಾಡಿಕೊಡುತ್ತದೆ. ಕುವೆಂಪುರವರ ಬಹುತೇಕ ಸಾಮಾಜಿಕ ಹಾಗೂ ವೈಚಾರಿಕ ಕವಿತೆಗಳು ಹೀಗೆ ಸರಳಗೊಂಡದ್ದು ಹಾಗೂ ಒಂದು ರೀತಿಯ ಅಂತರ್ಮುಖದಿಂದ ಬಹಿರ್ಮುಖಕ್ಕೆ ಹೊರಳಿದ್ದು ಮುಂದಿನ ಹಲವು ಶ್ರೀಸಾಮಾನ್ಯ ಚಳುವಳಿಗಳಿಗೆ ಸ್ಫೂರ್ತಿ ನೀಡಲು ಶಕ್ತವಾದವು ಎಂಬುದನ್ನು ಮರೆಯುವಂತಿಲ್ಲ. ಕುವೆಂಪು ಅಂತಿಮವಾಗಿ ಪ್ರತಿಪಾದಿಸಿದ 'ಸರ್ವರಿಗೆ ಸಮಬಾಳು ಸರ್ವರಿಗೆ ಸಮಪಾಲು' ಹಾಗೂ 'ಮನುಜ ಮತ ವಿಶ್ವಪಥ'ದಂಥ ಸರಳ ಸತ್ಯ ಹೇಳುವ ತತ್ವಗಳಿಗೆ ಪೂರಕವಾಗಿ ಹಿಂದೆಯೇ ಈ 'ಕಲ್ಕಿ' ಕವಿತೆ ಬರೆದಿದ್ದರೆಂಬುದನ್ನು ಮನಗಂಡಾಗ ಅವರ ಈ ತತ್ವಗಳು ಕೇವಲ ಹುರ್ತಿನಲ್ಲಿ ಹುಟ್ಟಿದ ಘೋಷಣೆಗಳಾಗಿರದೆ ಆಳವಾದ ಚಿಂತನೆಯಲ್ಲಿ ರೂಪುಗೊಂಡ ಅನುಭಾವಿಯೊಬ್ಬನ ದರ್ಶನ ಎಂಬುದು ಸ್ಪಷ್ಟವಾಗುತ್ತದೆ. ಕುವೆಂಪುರವರ ಇಂಥ ಕವಿತೆಗಳು ಮುಂದಿನ ಪ್ರಗತಿಶೀಲ ಹಾಗೂ ಬಂಡಾಯದಂಥ ಸಾಹಿತ್ಯದ ಚಳುವಳಿಗೆ ಮಾರ್ಗವನ್ನು ನಿರ್ಮಿಸಿದವು ಎಂಬುದನ್ನು ಇಲ್ಲಿ ಮರೆಯುವಂತಿಲ್ಲ.

ಹಿ.ಚಿ. ಬೋರಲಿಂಗಯ್ಯ

★★★

Scanned with CamScanner